ವಿಶ್ವೇಶ್ವರಯ್ಯ ನಾಲಾ ಜಾಲದ ಎರಡನೇ ಹಂತದ ಕಾಮಗಾರಿಗಳು

2108 (3451); ಶ್ರೀ ಚೆಲುವರಾಯಸ್ವಾಮಿ.ಎನ್.

ಅ) ವಿಶ್ವೇಶ್ವರಯ್ಯ ನಾಲಾ ಜಾಲದ ಎರಡನೇ ಹಂತದ ಕಾಮಗಾರಿ ಬಂಗಾರುದೊಡ್ಡಿ ಅಣೆಕಟ್ಟು ನಾಲೆ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆಯೇ;

ಆ) ಇದಕ್ಕಾಗಿ ನಿಗದಿಪಡಿಸಿರುವ ಆಯವ್ಯಯ ಎಷ್ಟು ಯೋಜನೆಯ ಹಾಗೂ ಕಾಮಗಾರಿಗಳನ್ನು ಪ್ರಾರಂಭಿಸುವ ಉದ್ದೇಶಿತ ದಿನಾಂಕ ಇತ್ಯಾದಿ ವಿವರಗಳನ್ನು ಒದಗಿಸುವುದು?

ಶ್ರೀ ಎಂ.ಬಿ. ಪಾಟೀಲ, (ಜಲ ಸಂಪನ್ಮೂಲ ಸಚಿವರು)

ಅ) ವಿಶ್ವೇಶ್ವರಯ್ಯ ನಾಲಾ ಜಾಲದ ಎರಡನೇ ಹಂತದ ಕಾಮಗಾರಿ, ಬಂಗಾರುದೊಡ್ಡಿ ಅಣೆಕಟ್ಟು ನಾಲೆ ಅಭಿವೃದ್ಧಿ ಕಾಮಗಾರಿಗಳನ್ನು ಇನ್ನೂ ಪ್ರಾರಂಭಿಸಬೇಕಾಗಿದೆ. ವಿಶ್ವೇಶ್ವರಯ್ಯ ನಾಲಾ ಜಾಲದ ಎರಡನೇ ಹಂತದ ಕಾಮಗಾರಿಯ ಯೋಜನಾ ವರದಿಯನ್ನು ತಯಾರಿಸಲು ಟೆಂಡರ್ ಆಹ್ವಾನಿಸಿದ್ದು ಟೆಂಡರ್ ಪ್ರಕ್ರಿಯೆಯಲ್ಲಿದೆ. ಬಂಗಾರುದೊಡ್ಡಿ ಅಣೆಕಟ್ಟು ನಾಲೆ ಅಭಿವೃದ್ಧಿ ಕಾಮಗಾರಿಯ ಯೋಜನಾ ವರದಿ ತಯಾರಿಕಾ ಹಂತದಲ್ಲಿದೆ.

ಆ) 2014–15ನೇ ಸಾಲಿಗೆ ವಿಶ್ವೇಶ್ವರಯ್ಯ ನಾಲಾ ಜಾಲದ ಎರಡನೇ ಹಂತದ ಅಭಿವೃದ್ಧಿ ಕಾಮಗಾರಿಗೆ ₹ 50.00 ಕೋಟಿಗಳ ಹಾಗೂ ಬಂಗಾರುದೊಡ್ಡಿ ಅಣೆಕಟ್ಟು ನಾಲೆ ಅಭಿವೃದ್ಧಿ ಕಾಮಗಾರಿಗಾಗಿ ₹ 5.00 ಕೋಟಿಗಳ ಅನುದಾವನ್ನು ಕಾವೇರಿ ನೀರಾವರಿ ನಿಗಮದಲ್ಲಿ ನಿಗದಿಪಡಿಸಲಾಗಿರುತ್ತದೆ. ಸದರಿ ಕಾಮಗಾರಿಗಳ ಯೋಜನಾ ವರದಿಯು ತಯಾರಿಕಾ ಹಂತದಲಿದ್ದು, ಪ್ರಸಕ್ತ ಸಾಲಿನಲ್ಲಿ ಸದರಿ ಯೋಜನಾ ವರದಿಗೆ ಅಂದಾಜು ಪರಿಶೀಲನಾ ಸಮಿತಿಯ ತೆರವು, ಕಾವೇರಿ ನೀರಾವರಿ ನಿಗಮದ ಮಂಡಳಿಯ ಶಿಫಾರಸ್ಸನ್ನು ಅನುಸರಿಸಿ

ಕಾವೇರಿ ನೀರಾವರಿ ನಿಗಮದಿಂದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಸರ್ಕಾರಿ ಭೂಮಿಯ ಸ್ವರೂಪ

2109 (2703); ಶ್ರೀ ಚಿಕ್ಕಮಾದು ಎಸ್. (ಹೆಚ್.ಡಿ.ಕೋಟೆ)

ಅ) ಸರ್ಕಾರಿ ಭೂಮಿಗಳನ್ನು ಯಾವ ದಾಖಲೆಯ ಆಧಾರದ ಮೇಲೆ ಗೋಮಾಳ, ಬೀಲು, ಖರಾಬು, ಹಲ್ಲುಬನ್ನಿ, ಗಾಯರಾಣ ಎಂಬುದಾಗಿ ನಿರ್ಧರಿಸಲಾಗುತ್ತಿದೆ;

ಆ) ಸರ್ಕಾರಿ ಭೂಮಿಯ ಸ್ವರೂಪ ನಿರ್ಧರಿಸುವ ಕಂದಾಯ ಇಲಾಖೆಯ ಮೂಲ ದಾಖಲೆ ಯಾವುದು;

ಇ) ಕಂದಾಯ ಇಲಾಖೆಯ ದಾಖಲೆ 'ಕರ್ದಾದಲ್ಲಿ' ಸರ್ಕಾರಿ ಸರ್ಕಾರಿ ಖರಾಬು ಎಂಬುದಾಗಿ ದಾಖಲಾಗಿದ್ದು, ಪ್ರಸ್ತುತ ಪಹಣಿಯಲ್ಲಿ 'ಗೋಮಾಳ' ಎಂಬುದಾಗಿ ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಕರ್ದಾದಲ್ಲಿರುವಂತೆ ಭೂಮಿಯ ಸ್ವರೂಪವನ್ನು ಪಹಣಿಯಲ್ಲಿ ಇಂಡೀ ತರಿಸದೇ ಇರುವುದರ ಬಗ್ಗೆ ಸರ್ಕಾರದ ನಿಲುವೇನು;

ಉ) ಅಕ್ರಮ ಸಾಗುವಳಿ ಸಕ್ರಮ ಸಮಿತಿಯಲ್ಲಿ ಭೂ ಮಂಜೂರಾತಿ ನೀಡಲು ಯಾವ ದಾಖಲೆ ಆಧರಿಸಿ ಕ್ರಮವಹಿಸಬೇಕು; ಯಾವ ದಾಖಲೆಯನ್ನಾಧರಿಸಿ ಭೂಮಿಯನ್ನು ಗೋಮಾಳವೆಂದು ಪರಿಗಣಿಸಬೇಕು? (ಮಾಹಿತಿ ಒದಗಿಸುವುದು)

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 21 ರಂತೆ 'ಎ' ಖರಾಬು 'ಬಿ' ಖರಾಬು ಜಮೀನುಗಳೆಂದು ವರ್ಗೀಕರಣ ಮಾಡಲಾಗುವುದು. ಸರ್ಕಾರಿ ಜಮೀನುಗಳನ್ನು ಗೋಮಾಳ